**ಎಂ ವಿ ಸಿ 1173/2025 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿ: 20.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಹೆಚ್ ಎಸ್ ವಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಅಪರಾಧ ಸಂಖ್ಯೆ 162/2025 ರಲ್ಲಿನ ಪ್ರಥಮ ವರ್ತಮಾನ ವರದಿ, ದೂರು, ಸ್ಥಳ ಮಹಜರು, ಗಾಯದ ಪ್ರಮಾಣಪತ್ರ, ಐಎಂವಿ ವರದಿ, ಅಂತಿಮ ದೋಷಾರೋಪಣಾ ವರದಿ, ಒಂದು ಸಲಹಾ ಚೀಟಿ, 2 ವೈದ್ಯಕೀಯ ವೆಚ್ಚದ ಬಿಲ್ಲುಗಳು, ಡಿಸ್ ಚಾರ್ಜ ಸಮ್ಮರಿ, 2 ಎಂ ಆರ್ ಐ ಫಿಲಂಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 1 ರಿಂದ 12 ಎಂದು ಗುರುತಿಸಲಾಯಿತು.

ಆಧಾರ್ ಕಾರ್ಡ, ಪಾನ್ ಕಾರ್ಡ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಮೂಲ ದಾಖಲಾತಿಗಳು ಹಾಗೂ ಅವುಗಳ ನೋಟರೀಕೃತ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದೇನೆ. ಮೂಲ ದಾಖಲೆಗಳನ್ನು ನಕಲುಗಳೊಂದಿಗೆ ತಾಳೆ ಮಾಡಿ ಮೂಲ ದಾಖಲೆಗಳನ್ನು ಹಿಂತಿರುಗಿಸಿ ನಕಲುಗಳನ್ನು ನಿಶಾನೆ ಪಿ 13 ರಿಂದ 15 ಎಂದು ನಿಶಾನಿಸಲಾಯಿತು.

**ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**